**SET-4**

**Series BVM**

Code No. **15**

Roll No. | | | | | | | |

Candidates must write the Code on the title page of the answer-book.

- ಈ ಪ್ರಶ್ನೆ ಪತ್ರಿಕೆಯಲ್ಲಿ **12** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- ಈ ಪ್ರಶ್ನೆ ಪತ್ರಿಕೆಯಲ್ಲಿ **23** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಬರೆಯಿರಿ.**
- ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯ ಬಾರದು.
- Please check that this question paper contains **12** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **23** questions.
- **Please write down the Serial Number of the question before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

# ಕನ್ನಡ

# KANNADA

*ಅನುಮತಿಸಲಾದ ಸಮಯ : 3 ಗಂಟೆ* — *ಗರಿಷ್ಠ ಅಂಕಗಳು : 100*

*Time allowed : 3 hours* — *Maximum Marks : 100*

***ಸೂಚನೆಗಳು :*** *ಈ ಪ್ರಶ್ನೆ ಪತ್ರಿಕೆಯು A, B, C ಮತ್ತು D ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.*

| | | |
|---|---|---|
| **ವಿಭಾಗ – A** (ವ್ಯಾಕರಣ) | : | 25 ಅಂಕಗಳು |
| **ವಿಭಾಗ – B** (ಅರ್ಥಗ್ರಹಿಕೆ) | : | 10 ಅಂಕಗಳು |
| **ವಿಭಾಗ – C** (ಬರವಣಿಗೆ) | : | 15 ಅಂಕಗಳು |
| **ವಿಭಾಗ – D** (ಪಠ್ಯಗಳ ಅಧ್ಯಯನ) | : | 50 ಅಂಕಗಳು |

## ವಿಭಾಗ – A

## (ವ್ಯಾಕರಣ) : 25 ಅಂಕಗಳು

**1.** ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ :

(ಅ) ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ : *1*

ಗದ್ಯಪ್ರಕಾರಗಳಲ್ಲಿ ಪ್ರಬಂಧ ಹುಲುಸಾಗಿ ಬೆಳೆಯಿತು.

(ಆ) ಕೆಳಗಿನ ವಾಕ್ಯವನ್ನು ನಿಷೇಧಾರ್ಥದಲ್ಲಿ ಬಳಸಿ : *1*

ಕಾರ್ಯಕ್ರಮ ನಿರೂಪಣೆ ತುಂಬಾ ಗಂಭೀರವಾಗಿ ಇತ್ತು.

(ಇ) ಕೆಳಗಿನ ವಾಕ್ಯವನ್ನು ಸಾಮಾನ್ಯ ವಾಕ್ಯಗಳನ್ನಾಗಿ ಪರಿವರ್ತಿಸಿ : *1*

ಕಾರವಾರದಲ್ಲಿ ಮಲೇರಿಯಾ ಹಬ್ಬಿದ್ದರಿಂದ ಅವರು ಮಲೇರಿಯಾದಿಂದ ಬಳಲಬೇಕಾಯಿತು.

(ಈ) ಕೆಳಗಿನ ವಾಕ್ಯವನ್ನು ಭವಿಷತ್ ಕಾಲದಲ್ಲಿ ಬರೆಯಿರಿ : *1*

ಭಾರತ ಸರ್ಕಾರ ಅವರಿಗೆ ಉನ್ನತ ಪದವಿಯನ್ನು ನೀಡಿತು.

(ಉ) ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದವನ್ನು ಗುರುತಿಸಿ ಅದರ ಧಾತುವನ್ನು ತಿಳಿಸಿ : *1*

ದೇವರು ಸಮಸ್ತ ಲೋಕಗಳನ್ನು ಪ್ರೀತಿಯಿಂದ ಕಾಪಾಡುವನು.

**2.** ಕೆಳಗಿನ ಗದ್ಯಾಂಶವನ್ನು ಕನ್ನಡಕ್ಕೆ ರೂಪಾಂತರಿಸಿ : *5*

Young people are full of ideas and have infinite source of energy to put their ideas into practice. They have strong opinions and do not fear voicing them. Youths are up to date with current happenings and latest technology. So, they are very well suited for various jobs. Youths today are ready to take risks, face challenges and try hard to achieve their goals. They believe in themselves and their abilities to turn their passion into profession which makes them more successful.

Youths want the nation to be a better place. They can criticize the system of the nation as well as stand up to bring about changes towards making the society a better place. They are strong enough to fight for their own rights and for the rights of others as well. They never fear to support the right and raise voice against the wrong. They can fight against social evils – be it corruption, inequality or terrorism. They use social media and other platforms to raise voice against issues such as gender inequality, sexual harassment, religious issues, etc. They don't blindly accept the notions that are unfair or inhuman.

**3.** ಕೆಳಗಿನ ಯಾವುದಾದರೂ **ಎರಡು** ಪದ್ಯಗಳಿಗೆ ಪ್ರಸ್ತಾರ ಹಾಕಿ, ಗಣ ವಿಂಗಡಣೆ ಮಾಡಿ ಛಂದಸ್ಸಿನ ಹೆಸರು ತಿಳಿಸಿ : $2\frac{1}{2}+2\frac{1}{2}=5$

(ಅ) ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ

(ಆ) ಅರಿಕೇಸರಿಯೆಂಬಂ ಸುಂ
ದರಾಂಗನತ್ಯಂತ ವಸ್ತುವಂ ಮದಕರಿಯಂ

(ಇ) ಹಲಗೆ ಬಳಪವ ಪಿಡಿಯದೊಂದ
ಗ್ಗಳಿಕೆ ಪದವಿಟ್ಟಳುಪದೊಂದ
ಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ

(ಈ) ಸೊಂಪಿನಿಂ ಕಂಪಿಡುವ ಸಂಪಗೆಗಳಂ ಕೊಂಡು
ಹೊಂಪೆಸೆವ ಹೊಂಗೇದಗೆಯ ಹೂಗಳಂ ಕೊಂಡು

**4.** ಕೆಳಗಿನ ಯಾವುದಾದರೂ **ಎರಡು** ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ : $2\frac{1}{2}+2\frac{1}{2}=5$

(ಅ) ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು

(ಆ) ಬೆಳೆಯುವ ಸಿರಿ ಮೊಳಕೆಯಲ್ಲಿ

(ಇ) ಕುಂಬಾರನಿಗೆ ವರುಷ ; ದೊಣ್ಣೆಗೆ ನಿಮಿಷ

**5.** ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ :

(ಅ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ : $\frac{1}{2}+\frac{1}{2}=1$

(i) ಮನೆ

(ii) ಅಡವಿ

**ಅಥವಾ**

ಈ ಪದದ ನಾನಾರ್ಥಗಳನ್ನು ಬರೆಯಿರಿ :

**ಹೊಳೆ**

(ಆ) ಈ ಜೋಡು ನುಡಿಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ : $1+1=2$

(i) ಆಚಾರ – ವಿಚಾರ

(ii) ದ್ವೇಷ – ಅಸೂಯೆ

**ಅಥವಾ**

ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ :

(i) ಕಣ್ಣು ಕೆಂಪಗೆ ಮಾಡು

(ii) ಗಾಳಿಸುದ್ದಿ

(ಇ) ಈ ಪದಗಳನ್ನು ಬಿಡಿಸಿ ಬರೆಯಿರಿ : *1+1=2*

(i) ರಸ್ತೆಯಂಚಿನಲ್ಲಿ

(ii) ಗೃಹದೊಳಗಿದ್ದು

**ಅಥವಾ**

ಈ ಪದಗಳಲ್ಲಿನ ಪ್ರತ್ಯಯ ಗುರುತಿಸಿ ವಿಭಕ್ತಿ ಹೆಸರಿಸಿ :

(i) ದುಃಖಮಂ

(ii) ನೆಲದಲ್ಲಿ

## ವಿಭಾಗ – B

## (ಅರ್ಥಗ್ರಹಿಕೆ) : 10 ಅಂಕಗಳು

**6.** ಈ ಗದ್ಯಭಾಗವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

ಚಾಣಕ್ಯನ ಅಧ್ಯಯನ ನಡೆದದ್ದು ತಕ್ಷಶಿಲೆಯಲ್ಲಿ. ಅದು ಜಗತ್ತಿನ ಅತ್ಯಂತ ಪ್ರಾಚೀನ ವಿಶ್ವವಿದ್ಯಾಲಯಗಳಲ್ಲಿ ಒಂದು. ಸಾಮಾನ್ಯವಾಗಿ ಆರಂಭಿಕ ಶಿಕ್ಷಣ ಕೊಡುವ ಗುರುಕುಲಗಳಂತೆ ಅದು ಇರದೇ ಉನ್ನತ ವ್ಯಾಸಂಗಕ್ಕಾಗಿಯೇ ಹುಡುಗರು ಅರಸಿ ಬರುತ್ತಿದ್ದ ಶಿಕ್ಷಣ ಸಂಸ್ಥೆಯಾಗಿತ್ತು.

ಗಾಂಧಾರದ ರಾಜಧಾನಿಯಾಗಿದ್ದ ತಕ್ಷಶಿಲಾ ಒಂದು ಕಾಲದಲ್ಲಿ ಇಡಿಯ ದೇಶದ ಬೌದ್ಧಿಕ ರಾಜಧಾನಿಯಾಗಿತ್ತು. ಭರತನ ಮಗ ತಕ್ಷನ ಹೆಸರಲ್ಲಿ ನಿರ್ಮಾಣಗೊಂಡ ನಗರವಿದು. ಭೌಗೋಳಿಕವಾಗಿ ಯವನ, ಶಕ, ಹೂಣರೇ ಮೊದಲಾದ ಅನೇಕರ ಆಕ್ರಮಣಕ್ಕೆ ಒಳಗಾದರೂ ದೀರ್ಘಕಾಲ ಶ್ರೇಷ್ಠ ವಿಶ್ವವಿದ್ಯಾಲಯವಾಗಿ ಹೆಸರು ಮಾಡಿತ್ತು. ದೂರದ ಬನಾರಸ್, ರಾಜಗೃಹ, ಮಿಥಿಲಾ, ಉಜ್ಜೈನಿ, ಕುರು ಮೊದಲಾದ ಭಾಗಗಳಿಂದ ವಿದ್ಯಾರ್ಥಿಗಳು ಅಧ್ಯಯನಕ್ಕೆಂದು ಧಾವಿಸಿ ಬರುತ್ತಿದ್ದರು. ದೇಶವಷ್ಟೇ ಅಲ್ಲ, ಆನಂತರದ ದಿನಗಳಲ್ಲಿ ಗ್ರೀಕ್‌ನ ಮಿಲಿಂದನಂಥವರೂ ಇಲ್ಲಿ ಶ್ರುತಿ, ಸ್ಮೃತಿಗಳ ಅಧ್ಯಯನದಲ್ಲಿ ತೊಡಗಿದ್ದರು. ಇಲ್ಲಿನ ಶಿಕ್ಷಕರು ಜಾಗತಿಕ ಖ್ಯಾತಿ ಗಳಿಸಿದ್ದರು. ಜಾತಕ

ಕಥೆಗಳಲ್ಲಿ ಉಲ್ಲೇಖವಾದಂತೆ 16ನೇ ವಯಸ್ಸಿನ ವೇಳೆಗೆ ಆರಂಭಿಕ ಶಿಕ್ಷಣ ಮುಗಿಸಿ ವಿದ್ಯಾರ್ಥಿಗಳು ಇಲ್ಲಿಗೆ ಬಂದು ಸೇರಿಕೊಳ್ಳುತ್ತಿದ್ದರು. ಇಂಥ ವರ್ಣದವರು ಇಂಥಿಂಥದೇ ಶಿಕ್ಷಣ ಪಡೆಯಬೇಕೆಂಬ ನಿಯಮವೇನೂ ಇರಲಿಲ್ಲ. ಬ್ರಾಹ್ಮಣ ವಿದ್ಯಾರ್ಥಿಯೊಬ್ಬ ಭವಿಷ್ಯ ಹೇಳುವ ವಿದ್ಯೆ ಕಲಿತು ಬನಾರಸ್‌ನಲ್ಲಿ ಬೇಟೆಗಾರನಾಗಿ ದಿನದೂಡಿದ ಕಥೆಗಳಿವೆ. ಮತ್ತೊಬ್ಬ ಇಂದ್ರಜಾಲ ವಿದ್ಯಾ ಪ್ರವೀಣನಾದನಂತೆ. ಅದರರ್ಥ ಬ್ರಾಹ್ಮಣನಾದವರು ವೇದಾಧ್ಯಯನವನ್ನೇ ರೂಢಿಸಿಕೊಳ್ಳಬೇಕೆಂಬ ನಿಯಮವಿರಲಿಲ್ಲ. ಆಸಕ್ತಿಯ ಕ್ಷೇತ್ರದಲ್ಲಿ ವಿಶೇಷಾಧ್ಯಯನಕ್ಕೆ ಯಾವಾಗಲೂ ಮುಕ್ತ ಅವಕಾಶವಿತ್ತು.

ಶ್ರೇಷ್ಠ ವಿಶ್ವವಿದ್ಯಾಲಯ ತಕ್ಷಶಿಲಾದ ವೈಶಿಷ್ಟ್ಯವೆಂದರೆ ಅಲ್ಲಿ ಜಾತಿ ಭೇದವಿರದಂತೆ, ಬಡವ–ಬಲ್ಲಿದನೆಂಬ ವ್ಯತ್ಯಾಸವೂ ಇರಲಿಲ್ಲ. ರಾಜನ ಮಕ್ಕಳು, ವ್ಯಾಪಾರಿಗಳ ಮಕ್ಕಳು ಮತ್ತು ಅತಿ ಬಡ ವಿದ್ಯಾರ್ಥಿಗಳೂ ಜೊತೆಗೂಡಿಯೇ ಕಲಿಯುತ್ತಿದ್ದರು. ಸಿರಿವಂತರೇ ಇರಲಿ, ಬಡವರೇ ಇರಲಿ ಸರಳವಾಗಿ, ಸಮಾನವಾಗಿ ಬದುಕಲೇಬೇಕಿತ್ತು. ಜಾತಕ ಕಥೆಯ ಪ್ರಕಾರ, ಬನಾರಸ್‌ನ ರಾಜ ತನ್ನ ಮಗನಿಗೆ ಎಲೆಯ ಕೊಡೆಯೊಂದನ್ನು, ಒಂದು ಜೊತೆ ಚಪ್ಪಲಿಯನ್ನು ಒಂದು ಸಾವಿರ ವರಹಗಳನ್ನು ಕೊಟ್ಟು ಗುರುಗಳ ಬಳಿಗೆ ಕಳಿಸಿದನಂತೆ. ಆತ ಗುರುಗಳಿಗೆ ನಮಸ್ಕರಿಸಿ ಒಂದು ಸಾವಿರ ವರಹಗಳನ್ನು ಅಧ್ಯಯನ ಶುಲ್ಕವಾಗಿ ಕೊಟ್ಟು ವಿದ್ಯಾರ್ಜನೆಗೆ ನೆಲೆನಿಂತ. ಒಮ್ಮೆ ಆತ ರಸ್ತೆಯಲ್ಲಿ ಅಜ್ಜಿಯೊಬ್ಬಳು ಮಾರುವ ವಸ್ತುವನ್ನು ಕದ್ದು ಸಿಕ್ಕು ಬಿದ್ದಾಗ ಗುರುಗಳು ಮುಲಾಜು ನೋಡದೇ ಬೆನ್ನಿಗೆರಡು ಏಟು ಕೊಟ್ಟ ಉಲ್ಲೇಖವೂ ಕಥೆಯಲ್ಲಿದೆ.

ತಕ್ಷಶಿಲಾದಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕೆ ಅನುಸಾರವಾಗಿ ಹಗಲು ಮತ್ತು ರಾತ್ರಿ ಎರಡೂ ಅವಧಿಯಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಬಡ ವಿದ್ಯಾರ್ಥಿಗಳು ಬೆಳಗಿನ ಹೊತ್ತಲ್ಲಿ ಸೇವಾಕೈಂಕರ್ಯದಲ್ಲಿ ಮಗ್ನರಾಗಿರುತ್ತಿದ್ದರು. ಅಂಥವರಿಗಾಗಿ ಗುರುಗಳು ರಾತ್ರಿ ಪಾಠ ಮಾಡುತ್ತಿದ್ದರು. ತರಬೇತುಗೊಳಿಸಿದ ಕೋಳಿಗಳು ಅವರನ್ನು ಮುಂಜಾನೆ ಕೂಗಿ ಎಬ್ಬಿಸಿ ಅಧ್ಯಯನಕ್ಕೆ ಅಣಿಗೊಳಿಸುತ್ತಿದ್ದವಂತೆ. ಸೂರ್ಯೋದಯಕ್ಕೆ ಮುನ್ನ ವಿದ್ಯಾರ್ಥಿಗಳು ಹಾಸಿಗೆ ಬಿಡಬೇಕೆಂಬುದು ಅಲ್ಲಿನ ನಿಯಮವೇ ಆಗಿತ್ತು.

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :**

(ಅ) ಚಾಣಕ್ಯನ ಅಧ್ಯಯನ ನಡೆದದ್ದು ಎಲ್ಲಿ? *1*

(ಆ) ತಕ್ಷಶಿಲಾ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಲು ವಿದ್ಯಾರ್ಥಿಗಳು ಎಲ್ಲಿಂದ ಬರುತ್ತಿದ್ದರು ? *2*

(ಇ) ಭರತನ ಮಗ ಯಾರು ? *1*

(ಈ) ಶ್ರೇಷ್ಠ ವಿಶ್ವವಿದ್ಯಾಲಯ ತಕ್ಷಶಿಲಾದ ವೈಶಿಷ್ಟ್ಯವೇನು ? *2*

**7.** ಕೆಳಗಿನ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ : *4*

ಯಾವ ಹಾಡು ಹಾಡಲಿ ಯಾವ ಹಾಡಿನಿಂದ ನಿಮಗೆ
ನೆಮ್ಮದಿಯನು ನೀಡಲಿ ?

ಸುತ್ತ ಮುತ್ತ ಮನೆ ಮಠಗಳು ಹೊತ್ತಿಕೊಂಡು ಉರಿಯುವಲ್ಲಿ
ಸೋತು ಮೂಕವಾದ ಬದುಕು ನಿಟ್ಟುಸಿರೊಳು ತೇಲುವಲ್ಲಿ
ಯಾವ ಹಾಡು ಹಾಡಲಿ

ಬರಿ ಮಾತಿನ ಜಾಲದಲ್ಲಿ ಶೋಷಣೆಗಳ ಶೂಲದಲ್ಲಿ
ವಂಚನೆಗಳ ಸಂಚಿನಲ್ಲಿ ಹಸಿದ ಹೊಟ್ಟೆ ನೆರಳುವಲ್ಲಿ
ಯಾವ ಹಾಡು ಹಾಡಲಿ

ಉರಿವ ಕಣ್ಣ ಚಿತೆಗಳಲ್ಲಿ ಇರುವ ಕನಸು ಸೀಯುವಲ್ಲಿ
ಎದೆ ಎದೆಗಳ ಜ್ವಾಲಾಮುಖಿ ಹೊಗೆ ಬೆಂಕಿಯ ಕಾರುವಲ್ಲಿ
ಯಾವ ಹಾಡು ಹಾಡಲಿ

ಬೆಳಕಿಲ್ಲದ ದಾರಿಯಲ್ಲಿ ಪಾಳುಗುಡಿಯ ಸಾಲಿನಲ್ಲಿ
ಬಿರುಗಾಳಿಯ ಬೀಡಿನಲ್ಲಿ ಕುರುಡ ಪಯಣ ಸಾಗುವಲ್ಲಿ
ಯಾವ ಹಾಡು ಹಾಡಲಿ

## ವಿಭಾಗ – C

## ( ಬರವಣಿಗೆ ) : 15 ಅಂಕಗಳು

**8.** ಕೆಳಗಿನವುಗಳಲ್ಲಿ **ಒಂದನ್ನು** ಕುರಿತು ನಿಮ್ಮ ಅನುಭವಗಳನ್ನು ಬರೆಯಿರಿ : *5*

(ಅ) ಅನಿರೀಕ್ಷಿತ ಅದೃಷ್ಟ ತಮಗೆ ಒಲಿದು ಬಂದಾಗ .....

(ಆ) ನೀವು ಕಣ್ಣಾರೆ ಕಂಡ ಅಪಘಾತದ ಅವಘಡ .....

**9.** ನಿಮ್ಮ ಊರಿನಲ್ಲಿ ಸಮರ್ಪಕ ರಸ್ತೆಗಳು ಇಲ್ಲದಿರುವ ಕಾರಣ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ ಪತ್ರಿಕಾ ಸಂಪಾದಕರಿಗೊಂದು ಪತ್ರ ಬರೆಯಿರಿ. *5*

**10.** ಕೆಳಗಿನ ಗದ್ಯಭಾಗವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ : *5*

ವೈವಿಧ್ಯತೆ, ಮೂಲೆಮೂಲೆಯನ್ನೂ ತಲುಪಬಲ್ಲ ಸಾಮರ್ಥ್ಯದಿಂದಾಗಿ ಇಂಟರ್‌ನೆಟ್ ಸೌಲಭ್ಯವು ಭಾರತಕ್ಕೆ ಒದಗಿಸುತ್ತಿರುವ ಅವಕಾಶಗಳು ಸಾಗರದೋಪಾದಿಯಲ್ಲಿವೆ. ಆನ್‌ಲೈನ್ ಶಿಕ್ಷಣ, ಆರೋಗ್ಯ ಸಂಬಂಧಿ ಸೇವೆಗಳು, ಸರ್ಕಾರಿ ಯೋಜನೆಗಳ ಕುರಿತಾದ ಅರಿವು ಹಾಗೂ ಅತ್ಯುತ್ತಮ ಸಂವಹನೆ ಹೀಗೆ ಇದು ಹೊಂದಿರುವ ಪ್ರಯೋಜನಗಳ ಶ್ರೇಣಿ ಬಹುವ್ಯಾಪಕವಾದದ್ದು.

ಪ್ರಾದೇಶಿಕ ಭಾಷಾ ಮಾಧ್ಯಮ, ಟೆಲಿವಿಷನ್, ಕಂಪ್ಯೂಟರ್ ಮುಂತಾದವುಗಳಿಗೆ ಹೋಲಿಸಿದರೆ ಇಂಟರ್‌ನೆಟ್ ಜನಜೀವನದ ಜತೆಗೆ ಬೆಸೆದುಕೊಂಡ ರೀತಿ ಮತ್ತು ವೇಗ

ಹಲವು ಪಟ್ಟು ಹೆಚ್ಚು, ಕೇವಲ ಏದು ವರ್ಷಕ್ಕೂ ಕಡಿಮೆ ಅವಧಿಯಲ್ಲಿ ಅದು ಭಾರತದಲ್ಲಿ ಒಂದು ಕೋಟಿ ಜನರನ್ನು ತಲುಪಿದೆ. ಹಾಗೆಯೇ, 'ಆನ್‌ಲೈನ್ ಪಿಟಿಷನ್' / ಆನ್‌ಲೈನ್ ದೂರು ಎಂಬ ಒಂದು ಹೊಸ ಮಾದರಿಯ ವಕಾಲತ್ತಿನ ಉದಯಕ್ಕೂ ಕಾರಣವಾಗಿದೆ. ಈ ಇಂಟರ್‌ನೆಟ್. ಬೇರೆ ಬೇರೆ ಉದ್ದೇಶಗಳಿಗೆ ಅನುಸಾರವಾಗಿ ರಚಿಸಲ್ಪಟ್ಟ ಆನ್‌ಲೈನ್ ಪಿಟಿಷನ್‌ಗಳಿಗೆ ಸಿಕ್ಕುವ ಜನಬೆಂಬಲವನ್ನಾಧರಿಸಿ ಅದರ ಯಶಸ್ಸಿನ ಮೌಲ್ಯಮಾಪನ ಮಾಡಲಾಗುತ್ತದೆ.

ಗ್ರಾಮೀಣ ಭಾರತದ ವ್ಯವಹಾರ ಸಮುದಾಯದೆಡೆಗೆ ಇಂಟರ್‌ನೆಟ್ಟನ್ನು ತರುವುದು ಒಂದು ಕ್ರಾಂತಿಕಾರಕ ಪರಿಕಲ್ಪನೆಯಾಗಿದೆ. ಏಜೆಂಟರ ಪರವಾನಗಿ ಪಡೆದುಕೊಳ್ಳಬೇಕೆಂದರೆ, ಇಂಟರ್‌ನೆಟ್ ಸಂಪರ್ಕ ಹೊಂದಿರಬೇಕು ಎಂಬುದು ಅನೇಕ ತೈಲ ಕಂಪನಿಗಳು ವಿಧಿಸುವ ಪೂರ್ವಭಾವಿ ಷರತ್ತು; ಇಂಥ ಕಂಪನಿಗಳು ಹಲವು ತೆರನಾದ ಆನ್‌ಲೈನ್ ವ್ಯವಹಾರಗಳನ್ನು ಹೊಂದಿರುತ್ತವೆಯಾದ್ದರಿಂದ ಇಂಥ ಷರತ್ತು ವಿಧಿಸುವುದುವಾಡಿಕೆ. ಇಂಟರ್‌ನೆಟ್ ಸಂಪರ್ಕ ಲಭ್ಯತೆಯಿಂದಾಗಿಯೇ ದೇಶದೆಲ್ಲೆಡೆಯ ಹಲವು ಮಂದಿ ಉದ್ಯಮಶೀಲರಾಗುವುದು ಸಾಧ್ಯವಾಗಿದೆ. ಕೆಲವರು ಅಡುಗೆ ಅನಿಲಕ್ಕೆ ಸಂಬಂಧಿಸಿ ಪರವಾನಗಿಗಳನ್ನು ಪಡೆದರೆ, ಮತ್ತೆ ಕೆಲವರು ಫೇಸ್‌ಬುಕ್ ಮೂಲಕ ಕರಕುಶಲ ವಸ್ತುಗಳನ್ನು ಮಾರುತ್ತಾರೆ ಎಂಬುದು ಇಂಟರ್‌ನೆಟ್‌ನ ವಿಶಿಷ್ಟ ಸಾಧ್ಯತೆಗಳಿಗೆ ಸಾಕ್ಷಿಯಾಗಿದೆ.

ಕೃಷಿಕರು ಕೂಡ ಇಂಟರ್‌ನೆಟ್‌ನ ಪ್ರತಿಫಲಗಳನ್ನು ಅನುಭವಿಸಲು ಶಕ್ತರಾಗಿರುವುದು ವಿಶೇಷ. ಗ್ರಾಮೀಣ ಮತ್ತು ನಗರ ಸಮುದಾಯಗಳ ನಡುವಿನ ಅಂತರವನ್ನು ತಗ್ಗಿಸುವಲ್ಲಿ ಅಥವಾ ಅಸಮಾನತೆಯನ್ನು ನಿವಾರಿಸುವಲ್ಲಿ ಇಂಟರ್‌ನೆಟ್ ಅನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದಕ್ಕೆ 'ಇ-ಚೌಪಾಲ್' ಒಂದು ಅದ್ಭುತ ಉದಾಹರಣೆಯಾಗಿದೆ.

## ವಿಭಾಗ – D

## (ಪಠ್ಯಗಳ ಅಧ್ಯಯನ) : 50 ಅಂಕಗಳು

## ಗದ್ಯಭಾಗ

**11.** ಒಂದು ವಾಕ್ಯದಲ್ಲಿ ಉತ್ತರಿಸಿ **(ನಾಲ್ಕಕ್ಕೆ)** : *1×4=4*

(ಅ) ಮನೋರಮೆ ಬಹುಮಾನವಾಗಿ ಏನು ಕೊಡುವೆ ಎನ್ನುವಳು ?

(ಆ) ಎ.ಆರ್. ಕೃಷ್ಣಶಾಸ್ತ್ರಿಗಳು ಎಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು ?

(ಇ) ಕೆಂಪುಪಟ್ಟಿಗೆ ಸೇರಿದ ಪ್ರಾಣಿ ಯಾವುದು ?

(ಈ) ಕಿಡ್ನಿಸ್ಟೇನ್ ಬಗ್ಗೆ ತಿಳಿಯಲು ಲೇಖಕಿ ಯಾರನ್ನು ಭೇಟಿ ಮಾಡಿದರು ?

(ಉ) ಧಣಿ ಎಂದಿಗೂ ಯಾರನ್ನು ನಂಬುವುದಿಲ್ಲ?

**12.** ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ **(ಎರಡಕ್ಕೆ)** : *2×2=4*

(ಅ) ತಾನು ಅದೃಷ್ಟವಂತೆ ಎಂದು ಲೇಖಕಿ ನೇಮಿಚಂದ್ರ ಭಾವಿಸಲು ಕಾರಣವೇನು ?

(ಆ) ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು ?

(ಇ) ಮನೋರಮೆ ಕತೆ ಹೇಳೆಂದು ಕೇಳಲು ಕಾರಣವೇನು ?

**13.** ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ **(ಒಂದಕ್ಕೆ)** : *3×1=3*

(ಅ) ಬಾಯಿಚಪಲ ತಣಿಸುವ ಅಕ್ಷಯಪಾತ್ರೆ.

(ಆ) ದುರಂತದ ಮೂಲಬೀಜಗಳು ಚಹಾಗಿಡದ ರೂಪದಲ್ಲಿ ಬಂದವು.

**14.** ಐದಾರು ವಾಕ್ಯಗಳಲ್ಲಿ ಉತ್ತರಿಸಿ **(ಒಂದಕ್ಕೆ)** : *4×1=4*

(ಅ) ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುದು ?

(ಆ) ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಹೇಗೆ ? ವಿವರಿಸಿ.

## ಪದ್ಯಭಾಗ

**15.** ಒಂದು ವಾಕ್ಯದಲ್ಲಿ ಉತ್ತರಿಸಿ **(ನಾಲ್ಕಕ್ಕೆ)** : *1×4=4*

(ಅ) ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾದೇವತೆ ಯಾರು ?

(ಆ) ಗರತಿಯು ಹಾಲುಂಡ ತವರಿಗೆ ಏನೆಂದು ಹರಸುತ್ತಾಳೆ ?

(ಇ) ಏನು ಬಂದೇ ಬರುತ್ತದೆ ಎಂಬ ನಂಬಿಕೆಯಲ್ಲಿ ಯೇಸು ಶಿಲುಬೆಯೇರಿದ್ದಾನೆ ?

(ಈ) ಲಕ್ಷದಾರಿಗಳ ಚದುರಂಗದಾಟ ಯಾವುದು ?

(ಉ) ಗುರು ಹೇಗೆ ವರ್ತಿಸಬಾರದು ಎಂದು ಉರಿಲಿಂಗಪೆದ್ದಿ ಅಭಿಪ್ರಾಯಪಡುತ್ತಾನೆ ?

**16.** ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ **(ಎರಡಕ್ಕೆ)** : *2×2=4*

(ಅ) ದುರ್ಜನರ ಕಾರ್ಯ ಯಾವ ಬಗೆಯದೆಂದು ಪುರಂದರದಾಸರು ಅಭಿಪ್ರಾಯಪಡುತ್ತಾರೆ ?

(ಆ) ಕವಿ ಬೇಂದ್ರೆಯವರ ಪ್ರಕಾರ ಮುಪ್ಪು ಮತ್ತು ಹರೆಯದ ನಡುವಿನ ವ್ಯತ್ಯಾಸವೇನು ?

(ಇ) ಎಣ್ಣೆ ತೀರಿದ ದೀಪಗಳು ಏನನ್ನು ಸೂಚಿಸುತ್ತವೆ ?

**17.** ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ **(ಒಂದಕ್ಕೆ)** : *3×1=3*

(ಅ) ಒಬ್ಬಳನಾಳಲಾರಿರಿ ಗಂಡರೋ ನೀವ್ ಭಂಡರೋ.

(ಆ) ಮಾತೇ ಮರೆತು ಹೋಗಿದೆ ಕಣೆ.

**18.** ಐದಾರು ವಾಕ್ಯಗಳಲ್ಲಿ ಉತ್ತರಿಸಿ **(ಒಂದಕ್ಕೆ)** : *4×1=4*

(ಅ) ನಿರ್ಮಲಚಿತ್ತದ ಅಗತ್ಯವನ್ನು ಕವಿ ಸೋಮನಾಥ ಹೇಗೆ ನಿರೂಪಿಸಿದ್ದಾನೆ ?

(ಆ) 'ಒಮ್ಮೆ ನಗುತ್ತೇವೆ' ಎಂಬ ಕವಿತೆಯಲ್ಲಿ ವ್ಯಕ್ತವಾಗುವ ನಗುವಿನ ವೈಶಿಷ್ಟ್ಯವನ್ನು ವಿವರಿಸಿ ?

## ನಾಟಕ

**19.** ಒಂದು ವಾಕ್ಯದಲ್ಲಿ ಉತ್ತರಿಸಿ **(ಮೂರಕ್ಕೆ)** : *1×3=3*

(ಅ) ಆನೆ ಯಾರ ಅಂಗಡಿಯನ್ನು ದೂಡಿ ಬೀಳಿಸಿತು ?

(ಆ) ನಿರೂಪಕರಿಗಿದ್ದ ಕೆಟ್ಟ ಕುತೂಹಲ ಯಾವುದು ?

(ಇ) ರಮೇಶ್‌ಬಾಬು ಯಾರು ?

(ಈ) ಕೃಷ್ಣೇಗೌಡನನ್ನು ಕಾಡಿದ ಕಳವಳವೇನು ?

**20.** ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ **(ಒಂದಕ್ಕೆ)** : *2×1=2*

(ಅ) ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ ?

(ಆ) ತನ್ನ ಕೆಲಸ ಅತ್ಯಂತ ಅಪಾಯಕಾರಿ ಎಂದು ದುರ್ಗಪ್ಪ ವಿವರಿಸಿದ್ದು ಹೇಗೆ ?

**21.** ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ **(ಒಂದಕ್ಕೆ)** : *3×1=3*

(ಅ) ಕೋವಿ ಸಿಕ್ಕಿದೆ, ಆದರೆ ಹೆಣ ಸಿಗಲಿಲ್ಲ.

(ಆ) ವೆಪನ್ ಸರ್, ವೆಪನ್ ನಮಗೆ ಮುಖ್ಯ.

**22.** ಐದಾರು ವಾಕ್ಯಗಳಲ್ಲಿ ಉತ್ತರಿಸಿ **(ಒಂದಕ್ಕೆ)** : *4×1=4*

(ಅ) ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು ?

(ಆ) ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು ?

## ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (ಕವಿ ಕೃತಿ ಹಿನ್ನೆಲೆಯಲ್ಲಿ)

**23.** ಕೆಳಗಿನ ಯಾವುದಾದರೂ **ಇಬ್ಬರು** ಕವಿ–ಕೃತಿ ಪರಿಚಯ ಮಾಡಿಕೊಡಿ : *4×2=8*

(ಅ) ಬಸವಣ್ಣ

(ಆ) ಪಿ. ಲಂಕೇಶ್

(ಇ) ಮುದ್ದಣ

(ಈ) ವೀರೇಂದ್ರ ಸಿಂಪಿ